## ಇಲ್ಲಿಯವರೆಗೆ...



ಭಾವೇಶ್‌ರ ಅಂತರಂಗವನ್ನು ಅಮ್ಮ ಸಬಲಗೊಳಿಸಿದರೆ, ಅಪ್ಪನೊಂದಿಗಿನ ಕಲಿಕೆ ವ್ಯಾವಹಾರಿಕ ಜಗತ್ತಿನ ನೋಟಗಳನ್ನು ಒದಗಿಸುತ್ತದೆ. ತಂದೆಯ ಕಚೇರಿಯಲ್ಲಿ ಅವರ ಅನುಮತಿ ಇಲ್ಲದೆ, ಸೀಸದಕಡ್ಡಿ ಕೊಳ್ಳಲೆಂದು ಭಾವೇಶ್ ಇಪ್ಪತ್ತು ಪೈಸೆ ತೆಗೆದುಕೊಳ್ಳುತ್ತಾರೆ. ಆ ತಪ್ಪಿಗಾಗಿ ಭಾವೇಶ್ ತಂದೆಯ ಕೋಪಕ್ಕೆ ಗುರಿಯಾಗುತ್ತಾರೆ. ಸಾರ್ವಜನಿಕ ಜೀವನದಲ್ಲಿ ಹೊಂದಿರಬೇಕಾದ ನೈತಿಕ ಎಚ್ಚರದ ಅರಿವು ಅವರಿಗಾಗುತ್ತದೆ. ತಪ್ಪುಗಳ ಮೂಲಕವೇ ಬದುಕಿನ ಪಾಠಗಳನ್ನು ಗ್ರಹಿಸುವ ಭಾವೇಶ್, ತಂದೆ ನಡೆಸುತ್ತಿದ್ದ ಇಟ್ಟಿಗೆ ವಹಿವಾಟನ್ನೂ ಗಮನಿಸುತ್ತಾ, ಇಟ್ಟಿಗೆಗಳಿಂದ ಕಟ್ಟಡ ನಿರ್ಮಾಣದ ಪರಿಯನ್ನೂ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಹೈಸ್ಕೂಲಿನ ಮಿತ್ರ ದಿನೇಶ್ ಕಾರಿಯಾ ಜೊತೆಗೂಡಿ ನೇಪಾಳಕ್ಕೆ ಸೈಕಲ್‌ನಲ್ಲಿ ಪ್ರವಾಸ ಕೈಗೊಳ್ಳಲು ನಿರ್ಧರಿಸಿ ಸಿದ್ಧತೆ ನಡೆಸುತ್ತಾರೆ. ಅದೇ ಅವಧಿಯಲ್ಲಿ ಕುಟುಂಬದಲ್ಲಿ ಚಂಡಮಾರುತದ ವಾತಾವರಣ ಕಾಣಿಸಿಕೊಂಡರೂ, ಭಾವೇಶ್ ದೃಢವಾಗಿ ತಮ್ಮ ನಿಲುವು ಮತ್ತು ಗುರಿಗೆ ಅಂಟಿಕೊಳ್ಳುತ್ತಾರೆ.

ಅರಿವಾಗತೊಡಗಿತ್ತು. ಸೈಕಲ್ ತುಳಿಯುತ್ತಾ ಹೊರಟಂತೆ, ಹೆದ್ದಾರಿ ತಲುಪುವುದಕ್ಕೇ ಮೂರು ಗಂಟೆ ಹಿಡಿಯಿತು. ರಾಷ್ಟ್ರೀಯ ಹೆದ್ದಾರಿ 6ನ್ನು ತಲುಪಿ ಎಡಕ್ಕೆ ತಿರುಗಿದಾಗ, ಅವರ ಪಯಣದ ಮೊದಲ ನಿಲ್ದಾಣ ಬಂದಿತು. ಅದು ದೇವರಿ ಹಳ್ಳಿ.

ಹಳ್ಳಿಯಲ್ಲಿ ಕೆಲವು ಮಂದಿ ಅವರನ್ನು ನಿಲ್ಲಿಸಿ ಮಾತಾಡಿಸಿದರು. ಉತ್ಸಾಹದಿಂದ ತಮ್ಮ ಯಾತ್ರೆಯ ಬಗ್ಗೆ ವಿವರಿಸಿದರು. ಗ್ರಾಮದವರು ತಮ್ಮ ಮನೆಗೆ ಕರೆದೊಯ್ದರು. ಊಟ ಮಾಡಿಸಿದರು. ಅಲ್ಲಿಂದ ಮುಂದೆ ಮತ್ತೆ ಹೊರಟರು. ಇಲ್ಲಿಂದ ಕೊಂಚವೇ ದೂರ ಸಾಗಿದ್ದರು. ಒಮ್ಮೆಗೇ ದೊಡ್ಡ ಆಸ್ಫೋಟದ ಸದ್ದು! ಅವರ ಮೈಮೇಲೆಲ್ಲ ಎಂತದ್ದೋ ಅಂಟು ಅಂಟು ಪದಾರ್ಥದ ಸುರಿಮಳೆ. ಗಾಬರಿಯಿಂದ ಏನಾಯಿತೆಂದು ಅರ್ಥವಾಗಲು ಕೊಂಚ ಸಮಯ ಹಿಡಿಸಿತ್ತು. ಮೆಲ್ಲನೆ ಜ್ಞಾನೋದಯ, ತಮ್ಮ ಸೈಕಲ್ ಟ್ಯೂಬ್ ಸ್ಫೋಟಿಸಿದೆ.

ಸಣ್ಣ ಸಣ್ಣ ಪಂಚರ್‌ನಿಂದ ಬಚಾವಾಗಲು, ಸೈಕಲಿನ ಟ್ಯೂಬಿನ ಒಳಗೆ ಒಂದು ಬಗೆಯ ದ್ರಾವಕವನ್ನು (ಸಲ್ಯೂಷನ್) ಒತ್ತಿ ಒತ್ತಿ ಅಮುಕಿ ತುರುಕಿದ್ದರು. ಅದರ ಒತ್ತಡ ತಡೆಯದೆ, ಮುಂದಿನ ಟೈಯರ್ ಒಡೆದು ಅದರೊಳಗಿದ್ದ ದ್ರವ ಇವರುಗಳ ಮೇಲೆ ಮಳೆಗರೆದಿತ್ತು. ಅವರ ಸೈಕಲ್ ಅಂಗಡಿಯ ಗೆಳೆಯ ಒಂದು ಪ್ರಯೋಗ ಮಾಡಲು ಈ ಸಲ್ಯೂಷನ್ ಕೊಟ್ಟಿದ್ದ. 'ಎಲ್ಲಾದರೂ ಸಣ್ಣ ಪಂಚರ್ ಆದರೆ, ಈ ಸಲ್ಯೂಷನ್ ತನ್ನೊಳಗಿನ ರಾಸಾಯನಿಕ ಕ್ರಿಯೆಯ ಮೂಲಕ ಪಂಚರ್ ಅನ್ನು ಮುಚ್ಚಬಲ್ಲದು' ಎಂದು ಹೇಳಿದ್ದ. ಆದರೆ ಈಗ ನೋಡಿದರೆ, ಅದೆಷ್ಟು ದೊಡ್ಡದಾದ ಪಂಚರ್ ಆಗಿತ್ತೆಂದರೆ, ಆ ದ್ರಾವಕದಿಂದ ಯಾವ ಉಪಯೋಗವೂ ಆಗಿರಲಿಲ್ಲ. ಬದಲಿಗೆ, ಇವರೆಲ್ಲರಿಗೂ ಅದರ ಪ್ರೋಕ್ಷಣೆ ಆಗಿತ್ತು.

ಕಲಿತ ಪಾಠವಿತ್ತು. ಹೊಸದೇನನ್ನೂ ಪ್ರಯೋಗ ಮಾಡಿ, 'ಫೀಲ್ಡ್ ಪ್ರೂವ್' ಮಾಡದೆಯೆ, ಏಕಾಏಕಿ ಮೊದಲ ಬಾರಿಗೆ ಇಂತಹ ಮಹತ್ವಾಕಾಂಕ್ಷೆಯ ದೀರ್ಘ ಪಯಣಕ್ಕೆ ಅಳವಡಿಸುವುದು ದಡ್ಡತನವಾಗಿತ್ತು. ಸೈದ್ಧಾಂತಿಕವಾಗಿ ಆಕರ್ಷಕವಾಗಿ ಕಾಣುವ ತಾಂತ್ರಿಕ ಉತ್ತರಗಳು, ಪ್ರಾಯೋಗಿಕವಾಗಿ ಅಳವಡಿಸಿದಾಗ, ಅಚ್ಚರಿಗಳಿರುತ್ತವೆ. ಅಪಾಯಗಳು ಕೂಡಾ. ಅದನ್ನು ಸಾಕಷ್ಟು ಬಾರಿ ಪರೀಕ್ಷಿಸದೆ ಅಳವಡಿಸಿದ್ದೇ ತಪ್ಪಾಗಿತ್ತು.

ಪುಣ್ಯಕ್ಕೆ ಜೊತೆಯಲ್ಲಿ ಒಂದು ಸಣ್ಣ ಪ್ಲಾಸ್ಟಿಕ್ ಟಬ್ ಹೊತ್ತು ತಂದಿದ್ದರು. ನೀರಿಗೇನೂ ಕೊರತೆ ಇರಲಿಲ್ಲ. ಕಚ್ಚಾ ಪಂಚರ್ ತಯಾರಿಸುವ ಸ್ಟಿಕರ್ ಕೂಡಾ ಜೊತೆಗೆ ಮುನ್ನೆಚ್ಚರಿಕೆಯಾಗಿ ತಂದಿದ್ದರು. ಪ್ರವಾಸಕ್ಕೆ ಸಿದ್ಧವಾಗುವ ಸಮಯದಲ್ಲಿ, ಇವರು ಪಂಚರ್ ಹಾಕುವ ಕಲೆಯನ್ನು ಕಲಿತದ್ದು ಮಾತ್ರವಲ್ಲ, ಸೈಕಲ್ಲಿನ ಪ್ರತಿ ಭಾಗವನ್ನು ಬಿಡಿಸಿ ಜೋಡಿಸುವುದನ್ನು ಕಲಿತಿದ್ದರು. ಅದೆಷ್ಟು ಬಾರಿ ಸಲೀಸಾಗಿ ಸೈಕಲ್ಲಿನ ಸಕಲ ಭಾಗಗಳನ್ನು ಕಳಚಿ, ಜೋಡಿಸಿದ್ದರೆಂದರೆ, ಹಿಂತಿರುಗಿ ಬಂದು ಒಂದು ಸೈಕಲ್ ಅಂಗಡಿ ಹಾಕುವಷ್ಟು ಪರಿಣಿತಿ ಪಡೆದಿದ್ದರು! ಈಗ ಕುಳಿತು ಪಂಚರ್ ರಿಪೇರಿ ಮಾಡಿದರು. ಹೊತ್ತು ಬಹಳವಾಗಿತ್ತು. ಹಾಗಾಗಿ ದೇವರಿಗಾವ್ ಮತ್ತು ರಾಜ್ನಂದ್ಗಾವ್ ನಡುವಿನ ಒಂದು ಸಣ್ಣ ಹಳ್ಳಿಯಲ್ಲಿ ಮೊದಲ ರಾತ್ರಿಯನ್ನು ಕಳೆಯಬೇಕಾಯಿತು.

ಮರುದಿನ ಬೆಳಗ್ಗೆ ಭಾವೇಶ್ ಅವರನ್ನು ಅವರ ಇಬ್ಬರು ಗೆಳೆಯರು ಬಾವಿಯ ಬಳಿಗೆ ಕರೆದೊಯ್ದರು. ಬಾವಿಯಿಂದ ನೀರನ್ನು ಸೇದಿ ಅವರ ಮೇಲೆ ದಬದಬ ಸುರಿದರು. ಮೂವರು ಗೆಳೆಯರೂ ಬಾವಿಯ ನೀರಿನಲ್ಲಿ ಸಂತಸದಿಂದ ಸ್ನಾನ ಮಾಡಿದಾಗ ಎಂತಹ ಆಹ್ಲಾದಕರ ಅನುಭವ! ಅಲ್ಲೇ ಹತ್ತಿರದ ಓರ್ವ ಗೃಹಸ್ಥ ಅವರನ್ನು ಕರೆದು ಬೆಳಗಿನ ನಾಷ್ಟಾ ಮತ್ತು ಚಹಾ ನೀಡಿದರು.

ಇಲ್ಲಿಂದ ಮುಂದೆ ಅವರು ಹೊರಟಂತೆ ಮತ್ತೆ ಮನವರಿಕೆಯಾಗಿತ್ತು, ಇದು ತಾವು ಯೋಜಿಸಿದಷ್ಟು ಸುಲಭದ ಯಾತ್ರೆಯಲ್ಲವೆಂದು. ಇಷ್ಟು ಹೊತ್ತಿಗೆ ಅವರು ರಾಜ್ನಂದ್ಗಾವ್, ದುರ್ಗ್, ಭಿಲಾಯ್, ರಾಯ್ಪುರ್ ಮೂಲಕ ಬಿಲಾಸ್ಪುರ ತಲುಪಿದ್ದರು. ತಾವು ಯಾವ ಹಳ್ಳಿ ಊರುಗಳನ್ನು ತಲುಪುತ್ತಿದ್ದರೋ, ಅಲ್ಲಿ ಮೊದಲು ಪೊಲೀಸ್ ಠಾಣೆಗೆ ಹೋಗುತ್ತಿದ್ದರು. ತಮ್ಮ ಜೊತೆಯಲ್ಲಿ ಕೆಲವು ಫಾರ್ಮ್‌ಗಳನ್ನು ತಂದಿದ್ದರು. ಮೂರೂ ಜನರ ಹೆಸರು ಮತ್ತು ದಿನಾಂಕ ಇರುವ ಆ ಫಾರ್ಮ್‌ನಲ್ಲಿ ಪೊಲೀಸ್ ಠಾಣೆಯ ಠಸ್ಸೆ ಒತ್ತಿಸಿಕೊಂಡು, ಒಂದು ಜೊತೆ ಫಾರ್ಮ್‌ಗಳನ್ನು ಠಾಣೆಯಲ್ಲಿ ದಾಖಲೆಗೆ ಕೊಟ್ಟು, ಮತ್ತೊಂದು ಪ್ರತಿಯನ್ನು ತಮ್ಮ ಬಳಿ ಜೋಪಾನವಾಗಿ ಇಟ್ಟುಕೊಳ್ಳುತ್ತಿದ್ದರು. ಈ ಮೂಲಕ ಹಾದಿಯಲ್ಲಿ ಏನಾದರೂ ಅಪ್ರಿಯ ಘಟನೆ ನಡೆದರೆ, ತಮ್ಮ ಮನೆಯವರಿಗೆ ಅವರು ಯಾವ ಊರಿನ ಮೂಲಕ ಹಾದೆವು, ಯಾವಾಗ ಹಾದೆವು ಎಂದು ತಿಳಿಯಲಿತ್ತು. ಜೊತೆಗೆ ಅವರಿಗೂ ಒಂದು ರೀತಿಯಲ್ಲಿ ತಾವು ಸುರಕ್ಷಿತ ಎಂಬ ಭಾವನೆ ಮೂಡುತ್ತಿತ್ತು. ಅದಲ್ಲದೆ ಅವರು ಈ ಹಾದಿಯಲ್ಲಿ ಈ ಮೂಲಕ ಹೋದರೆಂಬ ಸೈಕಲ್ ಯಾತ್ರೆಯ ದಾಖಲೆ ಕೂಡಾ ವ್ಯವಸ್ಥಿತವಾಗಿ ಸಿಗಲಿತ್ತು.

ಅದು ಮೊಬೈಲ್ ಫೋನ್‌ಗಳ ಕಾಲವಲ್ಲ. ಪ್ರತಿಯೊಂದು ಜಾಗದಲ್ಲಿ ಎಸ್.ಟಿ.ಡಿ. ಬೂತ್ ಇದ್ದ ಸಮಯವೂ ಅಲ್ಲ. ಒಂದು ಟ್ರಂಕ್ ಕಾಲ್ ಬುಕ್ ಮಾಡಿ ಕಾದಾಗ, ಸಂಪರ್ಕ ಏರ್ಪಟ್ಟಿತ್ತೆಂದರೆ, ದೊಡ್ಡ ಯುದ್ಧವನ್ನೇ ಜಯಿಸಿದಂತೆ. ಹಾಗೆಂದೇ ಮತ್ತೊಂದು ವ್ಯವಸ್ಥೆಯನ್ನೂ ಮಾಡಿದ್ದರು. ಪ್ರತಿ ಮೂರು ದಿನಕ್ಕೆ ಒಮ್ಮೆ ತಮ್ಮ ಊರಿಗೆ ತಮ್ಮ ಸುರಕ್ಷತೆಯ ಬಗ್ಗೆ ಒಂದು ಟೆಲಿಗ್ರಾಮ್ ಕಳುಹಿಸುತ್ತಿದ್ದರು. ಇಷ್ಟೆಲ್ಲ ಮುಂಜಾಗ್ರತೆಯೊಂದಿಗೆ ಪ್ರವಾಸ ಮುಂದುವರೆಯಿತು.

ಬಿಲಾಸ್ಪುರ ತಲುಪಿದಾಗ, 'ಲಯನ್ಸ್ ಕ್ಲಬ್'ನ ಜನರೊಡನೆ ಭೇಟಿಯಾಯಿತು. ಆ ದಿನಗಳಲ್ಲಿ ಸ್ಥಳೀಯ ಕರೆಗೆ ಪಬ್ಲಿಕ್ ಟೆಲಿಫೋನ್ ಅನುಕೂಲ ಎಲ್ಲಾ ಕಡೆಯೂ ಇರಲಿಲ್ಲ. ಹಾಗೆಂದೇ ಲಯನ್ಸ್ ಕ್ಲಬ್‌ನ ದೂರವಾಣಿ ಸಂಖ್ಯೆ ಇದ್ದರೂ, ಅವರಿಗೆ ಫೋನ್ ಮಾಡಿ ತಿಳಿಸಿ ಹೋಗುವುದು ಕಷ್ಟವಾಗಿತ್ತು. ನಗರದಲ್ಲಿ ಅಲೆದಾಡುತ್ತ, ಅವರಿವರನ್ನು ಕೇಳುತ್ತಾ ಲಯನ್ಸ್ ಕ್ಲಬ್‌ನ ಅಧ್ಯಕ್ಷರ ಬಳಿಗೆ ತಲುಪಿದರು. ಗೋಂದಿಯಾದ ಲಯನ್ಸ್ ಕ್ಲಬ್ ಈ ಎಲ್ಲ ಊರಿನ ಲಯನ್ಸ್ ಕ್ಲಬ್‌ಗಳಿಗೆ ಇವರ ಬಗ್ಗೆ, ಪ್ರವಾಸದ ಬಗ್ಗೆ ಪತ್ರ ಬರೆದಿರಲಿಲ್ಲ. ಹಾಗಾಗಿಯೇ, ಲಯನ್ಸ್ ಕ್ಲಬ್ ಅಧ್ಯಕ್ಷರನ್ನು ಹುಡುಕುವುದು, ಅವರಿಗೆ ತಮ್ಮ ಇಡೀ ಇತಿಹಾಸವನ್ನು ಹೇಳುವುದು, ತಮಗೆ ಬೇಕಿರುವ ಸಹಾಯನ್ನು ಬೇಡುವುದು – ಇದರಲ್ಲೇ ಬಹಳಷ್ಟು ಸಮಯ ಕಳೆದಿತ್ತು. ಇಷ್ಟೆಲ್ಲ ಆದ ಮೇಲೂ, ಅಗತ್ಯದ ಸಹಾಯಕ್ಕಿಂತ ಮರುದಿನ ನಮ್ಮೊಂದಿಗಿನ ಅವರ ಫೋಟೊ ದಿನಪತ್ರಿಕೆಯಲ್ಲಿ ಹೇಗೆ ಬರುತ್ತದೆ, ಈ ಯಾತ್ರೆಯಲ್ಲಿ ಅವರ ಸಹಯೋಗ ಎಷ್ಟಿದೆ, ಇದರತ್ತಲೇ ಅವರ ಹೆಚ್ಚಿನ ಗಮನಹರಿದಿತ್ತು.

ಬಿಲಾಸ್ಪುರದ ಲಯನ್ಸ್ ಕ್ಲಬ್‌ನ ಓರ್ವ ಸದಸ್ಯರು ಬಹಳ ಉದಾರವಾಗಿ, 'ತಮ್ಮ ಬಳಿ ಒಂದು ಸಿನಿಮಾ ಟಾಕೀಸ್ ಇದೆ. ಈ ರಾತ್ರಿ ನಿಮಗೆ ಬೇಕೆಂದರೆ ಅಲ್ಲಿ ತಂಗಬಹುದು' ಎಂದರು. ಇವರ ಯಾತ್ರೆಯ ಯೋಜನೆಯ ಪ್ರಕಾರ,